ನಾರಾಯಣಪುರ ವಲಯದಲ್ಲಿ 3 ಕಾರ್ಯ ನಿರ್ವಾಹಕ ಅಭಿಯಂತರರು ಹಾಗೂ 6 ಸಹಾಯಕ ಕಾರ್ಯಪಾಲಕ ಅಭಿಯಂತರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಭೀಮರಾಯನಗುಡಿ ವಲಯದಲ್ಲಿ 9 ಕಾರ್ಯ ನಿರ್ವಾಹಕ ಅಭಿಯಂತರರ ಹುದ್ದೆಗಳು ಹಾಗೂ 42 ಸಹಾಯಕ ಕಾರ್ಯಪಾಲಕ ಅಭಿಯಂತರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಈಗ ಖಾಲಿ ಇರುವ ಹುದ್ದೆ ಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಲೋಕೋಪಯೋಗಿ ಇಲಾಖೆಯು ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಬಡ್ತಿ ನೀಡಿ ಅಧಿಕಾರಿಗಳ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯ ವಶಕ್ಕೆ ನೀಡಿದ್ದು, ಸ್ಥಳನಿರೀಕ್ಷಣೆಯಲ್ಲಿರುವ ಅಧಿಕಾರಿಗಳನ್ನು ಖಾಲಿ ಇರುವ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಹುದ್ದೆಗಳಿಗೆ ಪದೋನ್ನತಿ ನೀಡಲು ಲೋಕೋಪಯೋಗಿ ಇಲಾಖೆ ಕ್ರಮ ಕೈಗೊಂಡಿದ್ದು, ಪದೋನ್ನತಿಯ ನಂತರ ಅಧಿಕಾರಿಗಳ ಸೇವೆಯನ್ನು ಜಲಸಂಪನ್ಮೂಲ ಇಲಾಖೆಗೆ ನೀಡಿದ ಕೂಡಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ಸಾಗುವಳಿ ಪತ್ರ ವಿತರಣೆ

09.ಶ್ರೀ ನರೇಂದ್ರ. ಆರ್.

ಶ್ರೀ ಜಿ. ಕರುಣಾಕರ ರೆಡ್ಡಿ(ಮಾನ್ಯ ಕಂದಾಯ ಸಚಿವರು)

ಅ) ಹನೂರು ವಿಧಾನ ಸಭಾ ಕ್ಷೇತ್ರದ ಎಲ್.ಪಿ.ಎಸ್.ಪ್ರಾಜೆಕ್ಟಿನ ಹಳ್ಳಿಗಳಲ್ಲಿನ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿರುವ 273 ಜನರಿಗೆ 30 ವರ್ಷಗಳ ಹಿಂದೆ ಸಾಗುವಳಿ ಪತ್ರ ವಿತರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೊಳ್ಳೇಗಾಲ ತಾಲ್ಲೂಕು ರಾಮಾಪುರ ಹೋಬಳಿ ಕುರಹಟ್ಟಿ ಹೊಸೂರು ಗ್ರಾಮದಲ್ಲಿ ಅರಣ್ಯ ಇಲಾಖೆಯಿಂದ ಬಿಡುಗಡೆಯಾದ ಜಮೀನಿನ ಪೈಕಿ 273 ಭೂರಹಿತರ ಕುಟುಂಬದವರಿಗೆ ತಲಾ 4 ಎಕರೆಯಂತೆ ಜಮೀನು ಮಂಜೂರು ಮಾಡಿ ಮಂಜೂರುದಾರರಿಗೆ 1979ರಲ್ಲಿ ತಾತ್ಕಾಲಿಕ ಸಾಗುವಳಿ ಚೀಟಿ ನೀಡಲಾಗಿದೆ.

ಆ) ಬಂದಿದ್ದಲ್ಲಿ, ಇವರಿಗೆ ಹಕ್ಕು ಪತ್ರ(ಪಟ್ಟಾ) ವಿತರಣೆ ಮಾಡಲು ಸರ್ಕಾರ ಇದುವರೆವಿಗೂ ತೆಗೆದುಕೊಂಡ ಕ್ರಮಗಳೇನು, ಇಲ್ಲದಿದ್ದಲ್ಲಿ ಎಂದಿನಿಂದ ಪಟ್ಟಾ ನೀಡಲು ಕ್ರಮಕೈಗೊಳ್ಳಲಾಗುತ್ತದೆ?

ಎಲ್.ಪಿ.ಎಸ್ ಪ್ರಾಜೆಕ್ಟಿನಲ್ಲಿ (ಲ್ಯಾಂಡ್ ಲೆಸ್ ಪೀಪಲ್ಸ್ ಸೆಟ್ಲ್ ಮೆಂಟ್ ಪ್ರಾಜೆಕ್ಟ್) ಭೂರಹಿತರಿಗೆ ದಿ ಗವರ್ನಿಂಗ್ ಬಾಡಿ ಆಫ್ ಲ್ಯಾಂಡ್ ಲೆಸ್ ಪೀಪಲ್ಸ್ ಸೆಟ್ಲ್‌ಮೆಂಟ್ ಏಜೆನ್ಸಿ ಕುರಹಟ್ಟಿ ಹೊಸೂರು ಈ ಸಮಿತಿಯು ದಿನಾಂಕ:

09.01.1979ರಂದು ಕೈಗೊಂಡ ನಿರ್ಣಯದಂತೆ ತಾತ್ಕಾಲಿಕ ಸಾಗುವಳಿ ಚೀಟಿ ಮಾತ್ರ ನೀಡಿದ್ದು ಖಾಯಂ ಸಾಗುವಳಿ ಚೀಟಿ ನೀಡುವ ಬಗ್ಗೆ ಈವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಸದರಿ ಸಮಿತಿಯ ಸಭೆ ಕರೆದು, ಆದೇಶಪಡೆದು ಖಾಯಂ ಸಾಗುವಳೀ ಚೀಟಿ ನೀಡುವ ಬಗ್ಗೆ ಅಗತ್ಯ ಕ್ರಮ ವಹಿಸಲಾಗುವುದು.

ಜಲಾಶಯಗಳಲ್ಲಿನ ನೀರಿನ ಪ್ರಮಾಣ

4 ಶ್ರೀ ಪಾಟೀಲ್ ಎ.ಎಸ್(ನಡಹಳ್ಳಿ, ದೇವರ ಹಿಪ್ಪರಗಿ)

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

1) ರಾಜ್ಯದಲ್ಲಿರುವ ಒಟ್ಟು ಎಷ್ಟು : ಜಲಾಶಯಗಳಿವೆ ಮತ್ತು ಸದರಿ ಜಲಾಶಯಗಳಲ್ಲಿ ಎಷ್ಟು ಪ್ರಮಾಣದಲ್ಲಿ ನೀರು ಸಂಗ್ರಹಿಸಬಹುದಾಗಿದೆ.

ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಜಲಾಶಯಗಳ ಒಟ್ಟು ಸಂಖ್ಯೆ: 63 ಈ ಜಲಾಶಯಗಳಲ್ಲಿ 649.55 ಟಿ.ಎಂ.ಸಿ. ನೀರು ಸಂಗ್ರಹಿಸಬಹುದಾಗಿದೆ.

2) ಸದರಿ ಎಲ್ಲಾ ಜಲಾಶಯಗಳಲ್ಲಿ ಹೂಳು ತುಂಬಿದೆಯೇ:

ಸದರಿ ಜಲಾಶಯಗಳ ಪೈಕಿ 7 ಜಲಾಶಯಗಳಲ್ಲಿ ಹೂಳಿನ ಸಂಗ್ರಹಣೆ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

3) ಹಾಗಿದ್ದಲ್ಲಿ ಅಂದಾಜು ಎಷ್ಟು ಪ್ರಮಾಣದಲ್ಲಿ ಹೂಳು ತುಂಬಿವೆ (ಪ್ರತಿ ಜಲಾಶಯವಾರು ವಿವರ ನೀಡುವುದು).

ಜಲಾಶಯಗಳಲ್ಲಿ ಸಂಗ್ರಹಣೆಗೊಂಡಿರುವ ಹೂಳಿನ ಪ್ರಮಾಣ

			ಟಿ.ಎಂ.ಸಿ.ಗಳಲ್ಲಿ
ತುಂಗಾಭಧ್ರಾ	28.131	ನಾರಾಯಣಪುರ	10.155
ಮಲಪ್ರಭಾ	2.77	ಆಲಮಟ್ಟಿ	5.309
ಭದ್ರಾ	2.152	ಹಿಪ್ಪರಗಿ	0.126
ಕೃಷ್ಣರಾಜಸಾಗರ	1.05		

4) ರಾಜ್ಯದ ಜಲಾಶಯಗಳ ಹೂಳೆತ್ತಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಪ್ರಸ್ತುತ ಬೆಳಗಾವಿ ಜಿಲ್ಲೆಯಲ್ಲಿ ಧೂಪದಾಳ್ ವಿಯರ್ ನಲ್ಲಿ ಹೂಳು ತೆಗೆಯುವ ಕಾರ್ಯವನ್ನು ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗಿದೆ. ಇದರ ಯಶಸ್ಸಿನ ನಂತರ ಇತರ ಜಲಾಶಯಗಳಲ್ಲಿ ಹೂಳು ತೆಗೆಯುವ ಕಾರ್ಯ ಕೈಗೊಳ್ಳಲು ಉದ್ದೇಶಿಸಲಾಗಿದೆ.

5) ಹೊಸಪೇಟೆಯ ತುಂಗಭದ್ರಾ ಜಲಾಶಯದ ನೀರು ಸಂಪೂರ್ಣ ಹಸಿರು ಬಣ್ಣಕ್ಕೆ ತಿರುಗಿ ಕಲುಷಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಸ್ವಚ್ಛತೆಗಾಗಿ ಯಾವ ಕ್ರಮ ಕೈಗೊಂಡಿದೆ?